ಈ) ಯಾವ ಷರತ್ತುಗಳ ಮೇಲೆ ಈ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸಲಾಗುವುದು.?

ಶ್ರೀ ಮಲ್ಲಿಕಾರ್ಜುನ.ಎಂ.ಖರ್ಗೆ (ಕಂದಾಯ ಸಚಿವರು):-

ಅ) 25.80 ಲಕ್ಷ ಎಕರೆ ಒತ್ತುವರಿ ಜಮೀನುಗಳನ್ನು ಸಕ್ರಮೀಕರಣಗೊಳಿಸುವುದಕ್ಕಾಗಿ ಒಟ್ಟು 10,86,826 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ಆ) ಹೌದು, ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಾಲಂ 94ಎ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳ 1966ರ ನಿಯಮ 108 ಎಫ್ ಅಡಿಯಲ್ಲಿ ಅರ್ಹರಾದ ವ್ಯಕ್ತಿಗಳ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲಾಗುವುದು.

ಇ) ಈ ಬಗ್ಗೆ ಸಮಿತಿಗಳನ್ನು ರಚಿಸಲಾಗಿದ್ದು, ಅವುಗಳು ಈಗಾಗಲೇ ಅರ್ಹತೆಯ ಮೇರೆಗೆ ಪ್ರಕರಣಗಳನ್ನು ಪರಿಶೀಲಿಸಿ ಸಕ್ರಮೀಕರಣಗೊಳಿಸುವುವು.

ಈ) ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 108ಜೆ ಅನ್ವಯ ಕೆಲವೊಂದು ನಿಬಂಧನೆಗಳ ಮೇರೆಗೆ ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸುವುವು.

ತುಂಗಭದ್ರ ನದಿ ಕಣಿವೆ ಯೋಜನೆಯಲ್ಲಿ ಭೂಸಾರ ಸಂರಕ್ಷಣಾ ಕಾಮಗಾರಿಗಳು

1563 (2138) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ತುಂಗಭದ್ರ ನದಿ ಕಣಿವೆ ಯೋಜನೆಯಲ್ಲಿ ಭೂಸಾರ ಸಂರಕ್ಷಣಾ ಕಾಮಗಾರಿಗಳಿಗಾಗಿ ಗುರುತಿಸಿರುವ ಪ್ರದೇಶ ಹಾಗೂ ತಾಲೂಕುಗಳು ;

ಆ) ಅಂದಾಜು ವೆಚ್ಚ (ತಾಲ್ಲೂಕುವಾರು ನೀಡುವುದು);

ಇ) 1991-92 ಹಾಗೂ 1992-93ನೇ ವಾರ್ಷಿಕ ಯೋಜನೆಗಳಿಗಾಗಿ ಬಿಡುಗಡೆ ಮಾಡಿರುವ, ಮಾಡಬೇಕಿರುವ ಅನುದಾನದ ಮೊತ್ತ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು)-

ಅ) ತುಂಗಭದ್ರಾ ನದಿ ಕೊಳ್ಳ ಯೋಜನೆಯಡಿಯಲ್ಲಿ 1991-92ನೇ ಸಾಲಿನಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಗತ ಮಾಡಲಾಗುತ್ತಿದೆ.

1..ಸವಣೂರು 2.ಶಿಗ್ಗಾಂವ್ 3.ಹಾನಗಲ್ 4.ಯಲಬುರ್ಗಾ 5.ರೋಣ 6.ಶಿರಹಟ್ಟಿ

ಭೂಸಾರ ಸಂರಕ್ಷಣಾ ಕಾಮಗಾರಿಗಳಿಗಾಗಿ ಭೂ ಸವಕಳಿಗೆ ಹೆಚ್ಚಿಗೆ ತುತ್ತಾಗುವ ಆಧ್ಯತಾ ಪ್ರದೇಶ 8.60 ಲಕ್ಷ ಹೆಕ್ಟೇರ್ ಎಂದು ಗುರುತಿಸಲಾಗಿದೆ.

ಆ) ತಾಲ್ಲೂಕುವಾರು ಕಾಮಗಾರಿಗಳಿಗಾಗಿ ತಗಲುವ ಅಂದಾಜು ವೆಚ್ಚ 1991-92ನೇ

State showing the details of districtwise Agricultural Kits supplied and the cost incurred during 1990-91 and 1991-92 under various schemes

		Oil Seed Procuction Programme				National Pulse Dev.Programme				Total	
		1990-91		1991-92		1990-91		1991-92		No.of Kits	Cost
		No.of Kits	Cost	No.of Kits	Cost	No.of Kits	Cost	No.of Kits	Cost		
1	Bangalore(U)	-	-	829	0.565	196	0.106	-	-	1025	0.671
2	Bangalore(R)	-	-	660	1.004	357	0.285	305	0.356	1322	1.645
3	Kolar	-	-	709	0.699	542	0.423	692	0.391	1943	1.513
4	Tumkur	1445	1.987	1666	0.813	528	0.376	676	0.426	4315	3.602
5	Shimoga	-	-	2252	1.141	750	0.559	661	0.485	3663	2.185
6	Chitradurga	3836	1.817	2867	1.530	620	0.513	631	0.604	7584	4.464
7	Mysore	-	-	2803	1.837	700	0.541	1090	0.707	4593	3.085
8	Mandya	-	-	1472	1.120	882	0.438	667	0.504	3021	2.062
9	Kodagu	-	-	-	-	-	-	-	-	-	-

10	Hassan	-	-	3723	1.513	53	0.383	605	0.371	4881	2.267
11	Chickmagalore	-	-	1146	0.754	432	0.310	531	0.271	2109	1.335
12	D.Kannada	-	-	200	0.475	-	-	475	0.250	675	0.725
13	Dharwad	5258	2.209	2564	1.080	2182	1.658	2524	1.202	12528	6.149
14	U.Kannada	-	-	0200	0.121	-	-	475	0.249	675	0.370
15	Belgaum	2131	1.26	1534	0.978	1023	0.758	1015	0.630	5703	3.634
16	Bijapur	5314	1.79	3259	0.995	1118	1.042	2000	1.357	12191	5.193
17	Raichur	6325	2.318	3452	2.533	2000	1.496	2404	1.602	16181	7.949
18	Bellary	4262	1.465	1534	0.925	1005	0.693	1004	0.628	7805	3.711
19	Gulbarga	5900	1.565	3070	1.624	3230	1.841	4019	2.306	16219	7.336
20	Bidar	4538	0.470	1201	0.395	2656	1.426	2895	1.795	11290	4.086
	Total	39539	14.898	37141	20.102	18774	12.848	22669	14.134	118123	61.982

ಸಾಲಿಗೆ ಈ ಕೆಳಕಂಡಂತಿದೆ.

ಕ್ರ.ಸಂ.	ತಾಲ್ಲೂಕು ಹೆಸರು	ತಗಲುವ ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
1.	ಸವಣೂರು	38.66
2.	ಶಿಗ್ಗಾಂವ್	3.81
3.	ಹಾನಗಲ್	0.65
4.	ಯಲಬುರ್ಗಾ	62.00
5.	ರೋಣ	4.40
6.	ಶಿರಹಟ್ಟಿ	16.92
	ಒಟ್ಟು	126.44

ಇ) ತಾಲ್ಲೂಕುವಾರು 1991-92 ಹಾಗೂ 1992-93ನೇ ವರ್ಷಗಳಿಗೆ ಬಿಡುಗಡೆ ಮಾಡಿರುವ, ಮಾಡಲಿರುವ ಅನುದಾನದ ಮೊತ್ತ (ಲಕ್ಷ ರೂಗಳಲ್ಲಿ)

ಕ್ರ.ಸಂ.	ತಾಲ್ಲೂಕು ಹೆಸರು	ಅನುದಾನ ಬಿಡುಗಡೆ ಮೊತ್ತ	
		1991-92	1992-93
1.	ಸವಣೂರು	38.86	ಪ್ರತಿ ಉಪ ವಿಭಾಗಕ್ಕೆ ಕಾಮ
2.	ಶಿಗ್ಗಾಂವ್	3.81	ಗಾರಿಗಳಿಗಾಗಿ, ಈ ಕೆಳಗಿನಂತೆ
3.	ಹಾನಗಲ್	0.65	ಅನುದಾನವನ್ನು ನಿಗದಿಪಡಿಸ
4.	ಯಲಬುರ್ಗಾ	62.00	ಲಾಗಿದೆ (ರೂ.ಲಕ್ಷಗಳಲ್ಲಿ)
5.	ರೋಣ	4.00	
6.	ಶಿರಹಟ್ಟಿ	16.92	ಸವಣೂರು ಉಪ ವಿಭಾಗ:
			ರೂ. 54.00 (ಸವಣೂರು
	ಒಟ್ಟು	126.44	ಶಿಗ್ಗಾಂವ್, ಹಾನಗಲ್,ತಾಲ್ಲೂಕುಗಳು)
			ಕೊಪ್ಪಳ ಉಪ ವಿಭಾಗ:54.00
			ಯಲಬುರ್ಗಾ(ಭಾಗಶಃ)
			ರೋಣ, ತಾಲ್ಲೂಕುಗಳು. ಯಲ್ಬುರ್ಗಾ,
			(ಭಾಗಶಃ) ರೂ.54.00
			162.00

1992-93ರ ತಾಲ್ಲೂಕುವಾರು ಆಧ್ಯತಾ ಪ್ರದೇಶ ಗುರುತಿಸಿರುವ ಕಾರ್ಯ ಪ್ರಗತಿಯಲ್ಲಿದ್ದು, ಅನುದಾನ ಹಂಚಿಕೆಯನ್ನು ಏಪ್ರಿಲ್ 92 ಮಾಹೆಯಲ್ಲಿ ನಿಶ್ಚಿತಗೊಳಿಸಲಾಗುವುದು.

ಅರಣ್ಯದಲ್ಲಿ ಒಣಗಿದ ಮರಗಳನ್ನು ಸೌದೆಯಾಗಿ ತರುವುದಕ್ಕೆ ಇರುವ ಕ್ರಮ

1564 (2140) ಶ್ರೀ ಕರಿಯಣ್ಣ (ಹೊಳೆಹೊನ್ನೂರು)

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಅರಣ್ಯದಲ್ಲಿ ಸೌದೆಯ ರೂಪದಲ್ಲಿ ಒಣಗಿದ ಮರಗಳನ್ನು ತರಲು ಯಾವ ವ್ಯವಸ್ಥೆ ಮಾಡಲಾಗಿದೆ ;

ಆ) ಪ್ರತಿ ವರ್ಷ ರಾಜ್ಯದಿಂದ ಈ ರೀತಿ ಬರುವ ಮರವು ಎಷ್ಟು ಟನ್ನು ಆಗುತ್ತದೆ ;

ಇ) ಕಾಡಿಗೆ ಬೆಂಕಿ ತಗಲುವುದರಿಂದ ಒಣಗಿದ ಮರಗಳು ಸುಟ್ಟು ಕಾಡಿನ ಸಂಪತ್ತು ನಷ್ಟ ಆಗುವುದಕ್ಕೆ ಇಲಾಖೆಯವರು ಕೈಗೊಂಡ ರಕ್ಷಣೆಯ ಕ್ರಮಗಳೇನು ;

ಶ್ರೀ ಈ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)-

ಅ) ಈ ಕೆಲಸವನ್ನು ಕೆನರಾ ವೃತ್ತವನ್ನು ಬಿಟ್ಟು ರಾಜ್ಯಾದ್ಯಂತ ಕರ್ನಾಟಕ ಅರಣ್ಯ ಕೈಗಾರಿಕಾ ನಿಗಮದವರ ಜೊತೆ ಅರಣ್ಯ ಕೂಲಿಕಾರ ಸಹಕಾರ ಸಂಘಗಳು ಕೂಡಾ ಸುಮಾರು ಶೇಕಡಾ 50 ರಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ.

ಆ) 1,00,000 ಟನ್ನು.

ಇ) ಈ ಕೆಳಗೆ ಕಾಣಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ :-

1. ಕಾಡಿಗೆ ಬೆಂಕಿ ಬೀಳದ ರೀತಿಯಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುವುದರೊಳಗೆ, ಡಿಸೆಂಬರ್, ಜನವರಿ ತಿಂಗಳಲ್ಲಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಸಾಲುಗಳನ್ನು ನಿರ್ಮಿಸಿ ಈ ಸಾಲುಗಳಲ್ಲಿ ಇರುವ ಸೊಪ್ಪು ಸೌದೆಗಳನ್ನು ತೆಗೆದು ಸುಟ್ಟು ಆಕಸ್ಮಿಕ ಬೆಂಕಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗದ ಹಾಗೆ ನೊಡಿಕೊಳ್ಳಲಾಗುವುದು. ಮುಖ್ಯವಾದ ಅರಣ್ಯ ಪ್ರದೇಶಗಳಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಂಕಿ ನಿರೋಧಕ ಸಾಲುಗಳನ್ನು ನಿರ್ಮಿಸುವುದರ ಜೊತೆಗೆ ಬೆಂಕಿ ವೀಕ್ಷಕರನ್ನು ಕೂಡಾ ನೇಮಿಸಿಕೊಂಡು ಅರಣ್ಯ ಪ್ರದೇಶಕ್ಕೆ ಮತ್ತು ನೆಡುತೋಪುಗಳಿಗೆ ಬೆಂಕಿ ಬಾರದಂತೆ ನೋಡಿಕೊಳ್ಳಲಾಗುತ್ತಿದೆ.

2. ರಾಷ್ಟ್ರೀಯ ಉದ್ಯಾನವನಗಳು ಮತ್ತು ಪ್ರಾಣಿ ಧಾಮಗಳನ್ನು ಬಿಟ್ಟು ಯಾವ ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಒಣಗಿದ ಮರಗಳು ಇರುತ್ತದೆಯೇ ಅಲ್ಲಿಂದ ಈ ಒಣಗಿದ ಮರಗಳನ್ನು ಬೇಸಿಗೆ ಕಾಲಕ್ಕೆ ಮುಂಚಿತವಾಗಿಯೇ ಹೊರ ತೆಗೆಯಲಾಗುವುದು.

3. ಅರಣ್ಯ ಪ್ರದೇಶದ ಸುತ್ತ ಮುತ್ತಲಿನ ಜನಗಳಿಗೆ ಬೆಂಕಿಯಿಂದ ಅರಣ್ಯ ಸಂಪತ್ತಿಗೆ ಆಗುವ ವಿಪತ್ತುಗಳನ್ನು ವಿವರಿಸಿ ಅರಣ್ಯ ಪ್ರದೇಶದಲ್ಲಿ ಬೆಂಕಿ ಬೀಳದ ಹಾಗೆ ಜನಗಳ ಸಹಕಾರವನ್ನು ಪಡೆಯಲಾಗುತ್ತಿದೆ.

4. ಒಂದು ವೇಳೆ ಅರಣ್ಯ ಪ್ರದೇಶಕ್ಕೆ ಆಕಸ್ಮಿಕವಾಗಿ ಬೆಂಕಿ ಬಿದ್ದಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರ ಮತ್ತು ಅಲ್ಲಿಯ ಜನಗಳ ಸಹಕಾರದಿಂದ ಆದಷ್ಟು ಬೇಗನೆ ಬೆಂಕಿಯನ್ನು ಆರಿಸಿ ಹೆಚ್ಚು ಪ್ರದೇಶಕ್ಕೆ ಬೆಂಕಿ ಆವರಿಸದಂತೆ